ಸೇಷನ್ ಕೇಸ್ ನಂ.191/2025
ಪಿ.ಡಬ್ಲ್ಯೂ: 05
ಸಿ.ಡಬ್ಲ್ಯೂ: 16

**ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

7. ಈಗ್ಗೆ 10-15 ವರ್ಷಗಳಿಂದ ನಾನು ಖಾನಾಪೂರದಲ್ಲಿ ವಾಸಿಸುತ್ತಿದ್ದೇನೆ. ಮನೆಯಲ್ಲಿ ನಾನು, ನನ್ನ ಗಂಡ ಹನುಮಂತ ಇಬ್ಬರೇ ಇರುತ್ತೇವೆ. ನಾವು ಕೂಲಿ ಕೆಲಸ ಮಾಡಿ ಬದುಕುತ್ತೇವೆ. ನಮಗೆ ಒಬ್ಬಳೇ ಮಗಳಿದ್ದು ಆಕೆಯನ್ನು ಮದುವೆ ಮಾಡಿ ಕೊಟ್ಟಿದ್ದೇವೆ.

8. ದಿಃ 03.08.2025 ಕ್ಕಿಂತ ಮುಂಚೆ ನಮಗೆ 1 ನೇ ಆರೋಪಿಗೆ ಹಾಗೂ ಚಾಸಾಃ 32 ರವರ ನಡುವೆ ಅಕ್ರಮ ಸಂಬಂಧ ಇದ್ದ ಬಗ್ಗೆ ಗೊತ್ತಿರಲಿಲ್ಲ ಕಾರಣ ನಮ್ಮ ಮನೆ ಅವರ ಮನೆಯಿಂದ ದೂರ ಇದೆ. ಆ ದಿನ ಪಂಚಾಯತಿಗೆ ಹೋದ ನಂತರವೇ ಆ ವಿಚಾರ ನಮಗೆ ತಿಳಿದಿತ್ತು. ಆ ದಿನ ಪಂಚಾಯತಿಗೆ ನಾನೊಬ್ಬಳೆ ಹೋಗಿದ್ದೆ ನನ್ನ ಗಂಡ ಕೆಲಸಕ್ಕೆ ಹೋಗಿದ್ದರು. ದೇವಸ್ಥಾನದಿಂದ ಸುಮಾರು 4-5 ಮನೆ ದೂರದಲ್ಲಿ ನಮ್ಮ ಮನೆ ಇದೆ. ಮೃತ ಸುರೇಶ ಬಂಡಿವಡ್ಡರನ ಮನೆ ನಮ್ಮ ಮನೆಯಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರಬಹುದು. ನಾನು ಘಟನಾ ಸ್ಥಳಕ್ಕೆ ಹೋದ ಕಾಲಕ್ಕಾಗಲೇ 1 ನೇ ಆರೋಪಿಯು ಪಂಚಾಯತಿ ಸೇರಿದ್ದ ಜಾಗದಲ್ಲಿ ನೆಲದ ಮೇಲೆ ಕುಳಿತಿದ್ದ. ಆದರೆ ಆ ಕಾಲಕ್ಕೆ ನಾನು ಆತನನ್ನು ಮಾತನಾಡಿಸಲಿಲ್ಲ. ಆ ಕಾಲಕ್ಕೆ ನಾನು ಯಾವುದೇ ಆರೋಪಿತರ ಜೊತೆ ಮಾಡನಾಡಲಿಲ್ಲ. ಆ ದಿನ ಪಂಚಾಯತಿಯಲ್ಲಿ ನಮ್ಮ ಸಮಾಜದ ಸುಮಾರು 15 ಮಂದಿ ಅಲ್ಲಿ ಸೇರಿದ್ದರು. ದೇವಸ್ಥಾನದ ಒಳಗೆ ಹೋಗಲು ಬರಲು ಒಂದೇ ದಾರಿ ಇದೆ ಎನ್ನುವುದು ಸರಿ. ನಾನು ಘಟನಾ ಸ್ಥಳಕ್ಕೆ ಹೋಗುವ ಮುನ್ನವೇ ಪಂಚಾಯತಿದಾರರು ಆದಾಗಲೇ ಬಂದು ಕುಳಿತಿದ್ದರು. ನಾನು ಬರುವಷ್ಟರಲ್ಲಿ ಪಂಚಾಯತಿ ಜಾಗದಲ್ಲಿ ಸಾಕಷ್ಟು ಜನ ಕುಳಿತಿದ್ದರು ಆದ್ದರಿಂದ ನಾನು ದೇವಸ್ಥಾನದ ಹೊರಗೆ ಕುಳಿತುಕೊಂಡೆ ಎಂದು ಸೂಚಿಸುವುದು ಸರಿಯಲ್ಲ.

ಪ್ರಶ್ನೆಃ ಸುರೇಶ ಬಂಡಿವಡ್ಡರನು 1 ನೇ ಆರೋಪಿಗೆ ಹೊಡೆದ ನಂತರವೇ ಅಲ್ಲಿ ಗಲಾಟೆ ಶುರುವಾಯಿತು ?
ಉತ್ತರಃ ಸುರೇಶ ಬಂಡಿವಡ್ಡರನು 1 ನೇ ಆರೋಪಿಗೆ ಹೊಡೆಯಲು ಪ್ರಯತ್ನಿಸಿದ ಆದರೆ 1 ನೇ ಆರೋಪಿಯು ಅದರಿಂದ ತಪ್ಪಿಸಿಕೊಂಡಿದ್ದರಿಂದ ಆತನಿಗೆ ಪೆಟ್ಟು ಹತ್ತಲಿಲ್ಲ.

9. ಆ ನಂತರ ಅಲ್ಲಿ ಸೇರಿದ್ದವರು 1 ನೇ ಆರೋಪಿಗೆ ಕೈಯಿಂದ ಹೊಡೆಯಲು ಪ್ರಾರಂಭಿಸಿದರು ಎಂದರೆ ಹೌದು ನಾವು ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ಆಗ ಆರೋಪಿತರು ಹಾಗೂ ನಮ್ಮಗಳ ನಡುವೆ ತಳ್ಳಾಟ ಪ್ರಾರಂಭವಾಯಿತು ಎನ್ನುವುದು ಸರಿ. ಆ ಕಾಲಕ್ಕೆ ನಾನು ಹಿಂದೆ ಸರಿದೆ ಎನ್ನುವುದು ಸರಿ. ಆ ಗದ್ದಲದಲ್ಲಿ ಸುರೇಶ ಬಂಡಿವಡ್ಡರನಿಗೆ ಚಾಕುವಿನಿಂದ ಹಾಕಿದ್ದನ್ನು ನಾನು ನೋಡಲಿಲ್ಲ ಎನ್ನುವುದು ಸರಿ. ಸಾಕ್ಷಿ ಹೇಳುತ್ತಾರೆ ನಾನು ಬಿಡಿಸಲು ಹೋದ ಸಾಗರ ಅಷ್ಟೇಕರನಿಗೆ 2 ನೇ ಆರೋಪಿಯು ಹಲ್ಲೆ ಮಾಡಿದ್ದನ್ನು ನೋಡಿರುತ್ತೇನೆ. 2 ನೇ ಆರೋಪಿಯು ಸಾಗರ ಅಷ್ಟೇಕರನಿಗೆ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಯು ಯಲ್ಲಪ್ಪ ಬಂಡಿವಡ್ಡರನು ಸುರೇಶ ಬಂಡಿವಡ್ಡರನಿಗೆ ಎರಡು ಬಾರಿ ಹೊಟ್ಟೆಗೆ ಹಾಗೂ ಕುತ್ತಿಗೆಗೆ ಚಾಕುವಿನಿಂದ ಹಾಕಿದ್ದನ್ನು ಕಣ್ಣಿನಿಂದ ನೋಡಿರುತ್ತೇನೆ. ಆ ರಕ್ತ ಕಂಡು ನನಗೆ ಬಹಳ ನೋವಾಯಿತು ಎಂದು ಹೇಳುತ್ತಾರೆ.

10. ಆ ದಿನ ನಾನು ಪಂಚಾಯತಿ ಕಟ್ಟೆಗೆ ಹೋಗಿಯೇ ಇಲ್ಲ, ಯಾವುದೇ ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ 2 ನೇ ಆರೋಪಿ ಯಲ್ಲಪ್ಪನು ಸುರೇಶ ಬಂಡಿವಡ್ಡರನಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆಂದು ಹೇಳಿದ್ದೇನೆಂದು ಸೂಚಿಸುವುದು ಸರಿಯಲ್ಲ. ಖಾನಾಪೂರ ನ್ಯಾಯಾಲಯದಲ್ಲಿ ಹೇಳಿಕೆ ಕೊಡುವ ಕಾಲಕ್ಕೆ ನಾವು, ನಮ್ಮ ಸಂಬಂಧಿಕರು ಹೀಗೇಯೇ ಹೇಳಬೇಕು ಎಂದು ಮಾತನಾಡಿಕೊಂಡು ಹೋಗಿ ಹೇಳಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

11. 2 ನೇ ಆರೋಪಿ ಮು.ಮಾ. 9 ರಂತಹ ಚಾಕುವಿನಿಂದ ಸುರೇಶ ಬಂಡಿವಡ್ಡರನಿಗೆ ಹಲ್ಲೆಯನ್ನು ಮಾಡಿಯೇ ಇಲ್ಲ, ಆ ರೀತಿ ದೃಶ್ಯಗಳನ್ನು ನಾನು ನೋಡಿಯೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಆ ಕಾಲಕ್ಕೆ 1 ಮತ್ತು 3 ನೇ ಆರೋಪಿತರು ಸುರೇಶ ಬಂಡಿವಡ್ಡರನಿಗೆ ಕೈಯಿಂದ ಹೊಡೆದು, ಕಾಲಿನಿಂದ ಒದ್ದರು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ. ಮು.ಮಾ. 9 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತರಿಗೂ ಹಾಗೂ ಸುರೇಶ ಬಂಡಿವಡ್ಡರನ ಸಾವಿಗೂ ಯಾವುದೇ ಸಂಬಂಧವಿಲ್ಲ ಎಂದು ಸೂಚಿಸುವುದು ಸರಿಯಲ್ಲ. 1 ನೇ ಆರೋಪಿ ಹಾಗೂ ಚಾಸಾಃ 32 ರವರ ನಡುವೆ ಯಾವುದೇ ಅಕ್ರಮ ಸಂಬಂಧವಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆ ದಿನ ಪಂಚಾಯತಿಯನ್ನು ಸುರೇಶ ಬಂಡಿವಡ್ಡರ ಕರೆದಿದ್ದ ಎಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.